# ಮಾತೆಯರಿಗೆ ಮತ್ತು ಭಗಿನಿಯರಿಗೆ ಎರಡು ಮಾತು

ಸ್ವಾಮಿ ಹರ್ಷಾನಂದ

> ಇಂದಿನ ಸ್ತ್ರೀಯರ ಜೀವನದಲ್ಲಿ ಗಮನಾರ್ಹ ಬದಲಾವಣೆ ಕಂಡುಬರುತ್ತಿದ್ದು, ಬದಲಾದ ಸಾಮಾಜಿಕ ಪರಿಸ್ಥಿತಿಯಲ್ಲಿ ಇದು ಅನಿವಾರ್ಯವಾದರೂ ಕೌಟುಂಬಿಕ ಮೌಲ್ಯಗಳನ್ನು ಉಳಿಸಿಕೊಳ್ಳುವ ಅನಿವಾರ್ಯತೆಯನ್ನು ಸ್ತ್ರೀಯರು ಮರೆಯಬಾರದು ಎನ್ನುತ್ತಾರೆ ಸ್ವಾಮಿ ಹರ್ಷಾನಂದಜಿಯವರು. ಸ್ವಾಮೀಜಿಯವರು ಬೆಂಗಳೂರು ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದಾರೆ.

## ಆಧುನಿಕ ಮಹಿಳೆಯರು

ಸಂಸಾರವು ಸಮಾಜದ ಕೇಂದ್ರವಾದರೆ, ಮಹಿಳೆಯು ಸಂಸಾರದ ಕೇಂದ್ರವಾಗಿರುತ್ತಾಳೆ. ಗೃಹಿಣಿಯಿಲ್ಲದೆ ಮನೆಯು ಗೃಹವೆನ್ನಿಸುವುದಿಲ್ಲ; ಅದು ದಾರುಣವಾದ ಅರಣ್ಯಕ್ಕಿಂತಲೂ ಭಯಂಕರವಾಗುತ್ತದೆ. ಇದು ಪ್ರಾಚೀನ ಭಾರತೀಯರ ಮತ. ಸನಾತನ ಹಿಂದೂ ಧರ್ಮವು ಎತ್ತಿ ಹಿಡಿದ ಮಹಿಳೆಯರ ಆದರ್ಶವು ಈ ಮೂಲಭೂತ ತತ್ತ್ವವನ್ನು ಆಧರಿಸಿದೆ. ಆಧುನಿಕ ಕಾಲದಲ್ಲಿ ಈ ಸ್ಥಿತಿಯು ಸ್ವಲ್ಪ ಸಡಿಲವಾಗಿದೆ. ಸಾಮಾನ್ಯವಾಗಿ ಭಾರತೀಯ ಮಹಿಳೆಯರು ಪ್ರಾಚೀನ ಜೀವನದ ರೀತಿನೀತಿಗಳನ್ನು ಹೆಚ್ಚಿನ ಮಟ್ಟಿಗೆ ಬಿಟ್ಟಿಲ್ಲವೆಂಬುದು ನಿಜ. ದೊಡ್ಡ ದೊಡ್ಡ ನಗರಗಳಲ್ಲಿ ಹೊರತು, ಇತರ ಕಡೆಗಳಲ್ಲಿ ಅವರು ಆಧುನಿಕತೆಗೆ ಇನ್ನೂ ಸಂಪೂರ್ಣವಾಗಿ ಮಾರು ಹೋಗಿಲ್ಲವೆಂಬುದೂ ನಿಜ. ಆದರೆ ಆಧುನಿಕತೆಯ ಆಕರ್ಷಣೆ ಹೆಚ್ಚಾಗುತ್ತಿದೆ ಎಂಬುದನ್ನು ಮಾತ್ರ ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಅನುಕೂಲತೆಗಳು, ನ್ಯಾಯ, ತರ್ಕಬದ್ಧತೆ ಮೊದಲಾದ ಪಾಶ್ಚಾತ್ಯ ತತ್ತ್ವಗಳ ಆಗಮನ, ಹಕ್ಕು ಬಾಧ್ಯತೆಗಳ ಜ್ಞಾನ, ಪ್ರಾಪಂಚಿಕ ಸುಖ-ಸುಧಾರಣೆಗಳ ಕಡೆಗೆ ಮನಸ್ಸು, ರಾಜಕೀಯ ಮತ್ತು ಸಾಮಾಜಿಕ ಜೀವನದಲ್ಲಿ ಕಂಡುಬರುತ್ತಿರುವ ನೂತನ ಮನೋಭಾವಗಳು, ಆರ್ಥಿಕ ಒತ್ತಡ ಇತ್ಯಾದಿ ಹಲವು ಕಾರಣಗಳಿಂದ ಮಹಿಳೆಯರ ಜೀವನದಲ್ಲಿ ಹಿಂದಿನ ಕಾಲದಿಂದ ಕಂಡುಬರುತ್ತಿದ್ದ ಸಮರಸವು ಅನಿವಾರ್ಯವಾಗಿ ಕದಡುತ್ತಿದೆ. ಇದುವರೆಗೂ ಪ್ರವೇಶವಿಲ್ಲದಿದ್ದ ಹಲವು ರೀತಿಯ ವಿಶೇಷ ಜ್ಞಾನಗಳಿಗೆ ಪ್ರವೇಶವು ಸಿಕ್ಕಿರುವ ಫಲವಾಗಿ ಜೀವನದ ಸಮಸ್ಯೆಗಳ ಬಗ್ಗೆ ಮಹಿಳೆಯ ದೃಷ್ಟಿಕೋಣ ಬದಲಾಗುತ್ತಿದೆ; ಹಾಗೆಯೇ ಜೀವನದ ರೀತಿನೀತಿಗಳೂ ಬದಲಾಗುತ್ತಿವೆ. ಮನೆ ಗೋಡೆಗಳ ಬಂಧನದಿಂದ ಪಾರಾಗಿ ಹೊರಬಂದು ಸಮಾಜ ಜೀವನದಲ್ಲಿ ತಮ್ಮ ಪ್ರತಿಭೆಗಳನ್ನು ವ್ಯಕ್ತಪಡಿಸಲು ಹಾತೊರೆಯುತ್ತಿರುವ ಮನೋಭಾವ ಬಹಳವಾಗಿ ಕಾಣಿಸುತ್ತಿದೆ. ಸ್ವಾತಂತ್ರ್ಯ ಸಮರದಲ್ಲಿ ಪುರುಷರೊಂದಿಗೆ ಹೋರಾಡಿದ್ದ ಮಹಿಳೆಯರು ಸ್ವಾತಂತ್ರ್ಯದ ಉದಯವಾದ ಮೇಲೆ ಮಾತೃಭೂಮಿಯ ಉದ್ಧಾರಕ್ಕಾಗಿ ಉತ್ಸಾಹದಿಂದ ಶ್ರಮಿಸುತ್ತಿರುವುದನ್ನು ನೋಡಿ ಸಂತೋಷವಾಗುತ್ತಿದೆ. ಮನೆಯ ಏಕಾಂತತೆಯಿಂದ ಹೊರಬಂದು ಪುರುಷರೊಡನೆ ಸಮಾನವಾಗಿ ವರ್ತಿಸಲು ಪ್ರಯತ್ನಿಸುತ್ತಿರುವುದರಿಂದ ಮಹಿಳೆಯರಿಗೂ ಪುರುಷರಿಗೂ ನಡುವೆ, ಕರ್ತವ್ಯಗಳ ಬಗ್ಗೆ ಇದ್ದ ಎಲ್ಲೆಯು ಕ್ರಮೇಣ ಮಾಯವಾಗುತ್ತಿದೆ. ಭವ್ಯವಾದ ಭವಿಷ್ಯತ್ತಿನ ದರ್ಶನವನ್ನು ಕಣ್ಣ ಮುಂದಿಟ್ಟುಕೊಂಡು ಮಹಿಳೆಯರು ಜೀವನದ ಎಲ್ಲ ಕ್ಷೇತ್ರಗಳಲ್ಲೂ ತಮ್ಮ ಶಕ್ತಿ ಪ್ರತಿಭೆಗಳನ್ನು ಪ್ರದರ್ಶಿಸಲು ಪ್ರಯತ್ನಿಸುತ್ತಿದ್ದಾರೆ. ಹಾಕಿ, ಟೆನ್ನಿಸ್ ಮೊದಲಾದ ಆಟಗಳಾಗಲಿ, ಪರ್ವತಾರೋಹಣವಾಗಲಿ, ಈಜುವುದಾಗಲಿ, ಕಾರ್ಖಾನೆ, ಪ್ರಯೋಗಶಾಲೆ, ಸರ್ಕಾರೀ ಕಛೇರಿ ಇವುಗಳಲ್ಲಿ ಕೆಲಸ ಮಾಡುವುದಾಗಲಿ, ಜನಜೀವನದಲ್ಲಿ ನಾಯಕತ್ವವನ್ನು ವಹಿಸುವುದಾಗಲಿ—ಇವಾವುದರಲ್ಲೂ ಮಹಿಳೆಯರು ಹಿಂದೆ ಬಿದ್ದಿಲ್ಲ.

## ಮಹಿಳೆಯರು ಮತ್ತು ಪುರುಷರಿಗೆ ಸಮಾನ ಹಕ್ಕು

ಇದರಲ್ಲಿ ತಪ್ಪೇನೂ ಇಲ್ಲ. ಇವೆಲ್ಲವೂ ಒಳ್ಳೆಯವೇ. ಇದು ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವೇ ಸರಿ. ಬುದ್ಧಿಶಕ್ತಿ, ಆತ್ಮಶಕ್ತಿಗಳಲ್ಲಿ ಪುರುಷರಿಗೆ ಯಾವ ರೀತಿಯಲ್ಲೂ ಕಡಮೆಯಿಲ್ಲದ್ದರಿಂದ ಮಹಿಳೆಯರು ಗೃಹದೊಳಗಿಂತ ಗೃಹದ ಹೊರಗೆ ಹೆಚ್ಚು ಉಪಯೋಗಕರರಾಗಿದ್ದರೆ ಅದು ಸ್ವಾಗತಾರ್ಹವೇ ಸರಿ. ಹಿಂದಿನ ಕಾಲದ ಗಾರ್ಗಿ, ಮೈತ್ರೇಯಿ, ಸುಲಭಾ ಮುಂತಾದ ಮಹಿಳಾ ರತ್ನಗಳ ಉದಾಹರಣೆಯೂ ನಮ್ಮ ಮುಂದೆ ಇದೆ. ಆದರೆ ಪುರುಷರೊಡನೆ ಸಮಾನ ಸ್ವಾತಂತ್ರ್ಯವನ್ನು ಬಯಸುವ ಪ್ರಶ್ನೆಯಲ್ಲದೆ ಧ್ಯೇಯ, ಸುಖ, ಪ್ರಾಯೋಗಿಕ ಕಷ್ಟಗಳು—ಇವೇ ಮೊದಲಾದ ಇತರ ಪ್ರಶ್ನೆಗಳನ್ನೂ ಮುಂದಿಟ್ಟುಕೊಂಡೇ ಮಹಿಳೆಯರು ತಮ್ಮ ಭವಿತವ್ಯದ ನಿರ್ಧಾರಗಳನ್ನು ಕೈಕೊಳ್ಳಬೇಕು. ಕೇವಲ ಪ್ರಾಪಂಚಿಕ ಸುಖಭೋಗಗಳೇ ಸಮಾಜದ ಮತ್ತು ನಾಗರಿಕತೆಯ ಧ್ಯೇಯವಾದರೆ ಅದರಲ್ಲಿ ಸ್ತ್ರೀಪುರುಷರಿಬ್ಬರಿಗೂ ಸಮಾನ ಅವಕಾಶವಿರಬೇಕು. ಅಥವಾ ಧ್ಯೇಯವು ಆಧ್ಯಾತ್ಮಿಕ ಸಂಪತ್ತಿಯಾದರೆ ಅದರಲ್ಲಿಯೂ ಸಹ ಪುರುಷರಂತೆ ಮಹಿಳೆಯರಿಗೂ ಸಮಾನಾವಕಾಶ ಸಿಗಬೇಕು.

ಸಮಾನತೆಯ ಮತ್ತು ಸಮಾನಾವಕಾಶದ ಭಾವನೆಗಳು ಬೆಳೆಯುತ್ತಿರುವುದರಿಂದಲೇ ಮಹಿಳೆಯರು ಈಗ ಎಲ್ಲ ಕ್ಷೇತ್ರಗಳಲ್ಲೂ ಮುನ್ನುಗ್ಗುತ್ತಿದ್ದಾರೆ. ಯಾಂತ್ರಿಕ ನಾಗರಿಕತೆಯಿಂದುಂಟಾದ ಆರ್ಥಿಕ ಬಿಕ್ಕಟ್ಟಿನ ಫಲವಾಗಿ ಮಹಿಳೆಯರು ಅನೇಕ ಬಾರಿ ಸಂಸಾರದ ಸಂಪಾದನೆಯನ್ನು ಹೆಚ್ಚಿಸಲೋಸುಗ ವೃತ್ತಿಜೀವನವನ್ನು ಕೈಗೊಳ್ಳುವುದೂ ಹೆಚ್ಚಾಗುತ್ತಿದೆ.

ಇದೆಲ್ಲವೂ ಸರಿಯೇ. ಆದರೆ ಇವುಗಳನ್ನು ನಾವೇಕೆ ಮಾಡುತ್ತಿದ್ದೇವೆ? ನಮ್ಮ ಧ್ಯೇಯವೇನು?ಯಾವುದನ್ನು ಸಾಧಿಸುವುದಕ್ಕಾಗಿ ಹೀಗೆ ಮುನ್ನುಗ್ಗುತ್ತಿದ್ದೇವೆ? ಇದನ್ನು ಮೊದಲು ಮಹಿಳೆಯರು ವಿಚಾರಿಸಬೇಕು.

## ಗೃಹಜೀವನದ ಪ್ರಾಮುಖ್ಯ

ಮಹಿಳೆಯರು ಯಾವ ವೃತ್ತಿಯನ್ನೇ ಕೈಕೊಳ್ಳಲಿ—ಮೇಷ್ಟರಾಗಲಿ, ವೈದ್ಯರಾಗಲಿ, ನರ್ಸುಗಳಾಗಲಿ, ಲಾಯರ್‌ಗಳಾಗಲಿ, ವಿಜ್ಞಾನಿಗಳಾಗಲಿ ಅಥವಾ ಮತ್ತೇನೇ ಆಗಲಿ—ಎಲ್ಲಿಯವರೆಗೆ ಅವರು ಗೃಹಜೀವನದ ಬೇಸರವನ್ನು ಕಳೆದುಕೊಳ್ಳುವುದಕ್ಕಾಗಿಯೇ ಕೈಕೊಳ್ಳುತ್ತಾರೆಯೋ, ಎಲ್ಲಿಯವರೆಗೆ ಉತ್ತಮ ಆದರ್ಶವನ್ನು ಇಟ್ಟುಕೊಂಡಿರುವುದಿಲ್ಲವೊ ಅಲ್ಲಿಯವರೆಗೆ ಅವರು ಮಾಡುವುದೆಲ್ಲ ವ್ಯರ್ಥ. ಇದರಿಂದ ಉಂಟಾಗುವ ಮನೋಧರ್ಮವು ಸಮಾಜಕ್ಕೆ ಅತ್ಯಂತ ಹಾನಿಕರ; ಏಕೆಂದರೆ ಕೇವಲ ನವೀನತೆಗಾಗಿ ಅಥವಾ ಸ್ವಾರ್ಥಕ್ಕಾಗಿ ಗೃಹಜೀವನವನ್ನು ಬಲಿಕೊಟ್ಟು ಹೊರಪ್ರಪಂಚಕ್ಕೆ ಧುಮುಕಿದರೆ ಸಮಾಜದ ಬುಡಕ್ಕೇ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ. ಇಂಥ ವಿಷಯಗಳಲ್ಲಿ ಪಾಶ್ಚಿಮಾತ್ಯ ಮಹಿಳೆಯರನ್ನು ಅನುಕರಿಸುವುದು ಅತ್ಯಂತ ಅಪಾಯಕರ. ಕೇವಲ ಸುಖಜೀವನದಿಂದ ಮಹಾವ್ಯಕ್ತಿತ್ವನ್ನೋ ಮಹಾರಾಷ್ಟ್ರವನ್ನೋ ಕಟ್ಟುವುದಕ್ಕೆ ಸಾಧ್ಯವಿಲ್ಲ.

> **ಮಹಿಳೆಯರು ಕೇವಲ ನವೀನತೆಗಾಗಿ ಅಥವಾ ಸ್ವಾರ್ಥಕ್ಕಾಗಿ ಗೃಹಜೀವನವನ್ನು ಬಲಿಕೊಟ್ಟು ಹೊರ ಪ್ರಪಂಚಕ್ಕೆ ಧುಮುಕಿದರೆ ಸಮಾಜದ ಬುಡಕ್ಕೇ ಕೊಡಲಿ ಪೆಟ್ಟು ಬಿದ್ದಂತಾಗುತ್ತದೆ.**

ಹಿಂದಿನ ಕಾಲದ ಮಹಿಳೆಯರು ಗೃಹಜೀವನದ ಕಾರ್ಯಗಳನ್ನು ಸಿಟ್ಟಿನಿಂದಾಗಲಿ ಬೇಸರದಿಂದಾಗಲಿ ಮಾಡದೆ ಪವಿತ್ರ ಕರ್ತವ್ಯವೆಂಬ ಭಾವನೆಯಿಂದ ಮಾಡುತ್ತಿದ್ದರು. ಇತರ ಕ್ಷೇತ್ರಗಳಲ್ಲೂ ಇದೇ ರೀತಿಯ ಪವಿತ್ರ ಮನೋಭಾವವನ್ನಿಟ್ಟುಕೊಂಡು ಆಧುನಿಕ ಮಹಿಳೆಯರು ವರ್ತಿಸುತ್ತಿರುವರೇ ಎಂಬುದು ವಿವಾದಾಸ್ಪದವಾದ ಮಾತು. ಇಂಥ ಮನೋಭಾವವಿಲ್ಲದ ಮೇಲೆ ವಿದ್ಯಾಭ್ಯಾಸ, ಪ್ರಗತಿ, ಸಮಾನ ಅವಕಾಶ ಇತ್ಯಾದಿ ಮಾತುಗಳಿಗೆಲ್ಲ ಅರ್ಥವೇ ಇಲ್ಲ! ಸ್ತ್ರೀಯರಾಗಲಿ ಪುರುಷರಾಗಲಿ, ಹೃದಯಶುದ್ಧಿ, ಇಂದ್ರಿಯನಿಗ್ರಹ, ನಿಃಸ್ವಾರ್ಥತೆ, ಮನಶ್ಶಕ್ತಿ ಇತ್ಯಾದಿಗಳಿಲ್ಲದಿದ್ದರೆ ಎಷ್ಟೇ ಗ್ರಂಥಗಳನ್ನು ಅಧ್ಯಯನ ಮಾಡಿದ್ದರೂ, ಎಷ್ಟೇ ಸಂಸ್ಥೆಗಳಿಗೆ ಸದಸ್ಯರಾಗಿದ್ದರೂ, ಎಷ್ಟೇ ಕೀರ್ತಿ ಪಡೆದಿದ್ದರೂ ಏನೂ ಪ್ರಯೋಜನವಿಲ್ಲ; ಏಕೆಂದರೆ ನಮ್ಮ ವ್ಯಕ್ತಿತ್ವ ನಡತೆಯಲ್ಲಿದೆ, ಶೀಲದಲ್ಲಿದೆ.

## ಮಹಿಳೆಯರಿಗೆ ಬೇಕಾದ ವಿದ್ಯಾಭ್ಯಾಸ

ಸೀತೆ, ಸಾವಿತ್ರಿ, ದಮಯಂತಿ, ಅನಸೂಯೆ—ಇವರು ಪ್ರಾಚೀನ ಭಾರತವು ಸಮಾಜದ ಮುಂದಿಟ್ಟ ಆದರ್ಶ ಮಹಿಳೆಯರು. ಇವರು ತಮ್ಮ ಜೀವನದಲ್ಲಿ ಬೇಕಾದಷ್ಟು ಕಷ್ಟವನ್ನನುಭವಿಸಿದರೂ ತಮ್ಮ ಚಾರಿತ್ರ್ಯವನ್ನು ಮಾತ್ರ ಅಚ್ಚಳಿಯದಂತೆ ಕಾಪಾಡಿಕೊಂಡರು. **ನಿಜವಾದ ವಿದ್ಯಾಭ್ಯಾಸದ ಮುಖ್ಯ ಕರ್ತವ್ಯವೇ ಶೀಲ ಚಾರಿತ್ರ್ಯಗಳನ್ನು ಕಲಿಸಿಕೊಡುವುದು.** ಈ ದೃಷ್ಟಿಯಿಂದ ನೋಡಿದರೆ ಅವರು ನಿಜವಾಗಿಯೂ ವಿದ್ಯಾವಂತರು. ಇದೇ ದೃಷ್ಟಿಯಿಂದ ನೋಡಿದಾಗ ತಾವು ವಿದ್ಯಾವಂತರೇ ಅಲ್ಲವೇ ಎಂಬುದನ್ನು ಆಧುನಿಕ ಮಹಿಳೆಯರು ಆತ್ಮಪರೀಕ್ಷೆಯಿಂದ ಅರಿಯಬೇಕು.

ಭಾರತೀಯ ಸಂಸ್ಕೃತಿಯಲ್ಲಿ ಆದರ್ಶಮಹಿಳೆಯು ಮೊದಲು ಆದರ್ಶಮಾತೆ; ಅನಂತರ ಆದರ್ಶ ಪತ್ನಿ. ನಿಃಸ್ವಾರ್ಥತೆಯಿಂದಲೂ ಶಾಂತಿಯಿಂದಲೂ ಅತ್ತೆ ಮಾವಂದಿರ, ಪತಿಯ ಮತ್ತು ಮಕ್ಕಳ ಸೇವೆ ನಡೆಸುವುದು ಆಕೆಯ ರಕ್ತದಲ್ಲಿಯೇ ಬಂದಿತ್ತು. ಈ ರೀತಿಯ ಮನೋಭಾವವು ಪ್ರಾಚೀನ ಭಾರತ ಮಹಿಳೆಯಲ್ಲಿ ಇದ್ದದ್ದರಿಂದಲೇ ಭಾರತೀಯ ಸಮಾಜವು ಬಿರುಕುಬಿಡದೆ ಉಳಿದುಕೊಂಡು ಬಂದಿರುವುದು. ಆಕೆಯ ಗೃಹವನ್ನು ಗೃಹ ಬಂಧನವನ್ನಾಗಿ ಮಾರ್ಪಡಿಸಿದ ಮತ್ತು ಬೌದ್ಧಿಕ ವಿದ್ಯಾಭ್ಯಾಸಕ್ಕೆ ಸಾಕಷ್ಟು ಎಡೆಕೊಡದ ಪರಿಸ್ಥಿತಿಯೂ ಕ್ರಮೇಣ ಉಂಟಾಗಿತ್ತು ಮತ್ತು ಇದು ಒಂದು ದೊಡ್ಡ ತಪ್ಪು ಎಂಬುದನ್ನೇನೋ ನಾವು ಒಪ್ಪಬೇಕಾದುದೇ. ಈ ತಪ್ಪುಗಳನ್ನು ಸರಿಪಡಿಸುವ ಪ್ರಯತ್ನವೂ ಈಗ ಭರದಿಂದ ಸಾಗುತ್ತಿದೆ. ಆದರೆ ಕಸಗುಡಿಸಿ ಬಿಸಾಡುವಾಗ ಕಸದೊಡನೆ ರತ್ನವನ್ನೂ ಬಿಸಾಡಬಾರದು. ಹಾಗೆಯೇ ಬೌದ್ಧಿಕ ವಿದ್ಯಾಭ್ಯಾಸದಿಂದ ಅಜ್ಞಾನವನ್ನು ಹೋಗಲಾಡಿಸುವ ನೆವದಲ್ಲಿ ಶ್ರದ್ಧೆ, ಭಕ್ತಿ, ಶೀಲ ಮೊದಲಾದ ಆಧ್ಯಾತ್ಮಿಕ ಗುಣಗಳ ನಾಶವಾಗಬಾರದು ಎಂಬುದನ್ನು ನೆನಪಿನಲ್ಲಿಡಬೇಕು. ಆದುದರಿಂದ ಈಗಿನ ಜ್ಞಾನ ಸಂಪಾದನಾರೂಪದ ವಿದ್ಯಾಭ್ಯಾಸದೊಂದಿಗೆ ಇಂದ್ರಿಯನಿಗ್ರಹ, ಸ್ವಾರ್ಥತ್ಯಾಗ, ಇತ್ಯಾದಿ ಗುಣಗಳನ್ನೂ ಬೆಳೆಸಬೇಕು. ಈ ದೃಷ್ಟಿಯಿಂದ ನೋಡಿದರೆ ಭಾರತೀಯ ಮಹಿಳೆಯರು ಪಾಶ್ಚಾತ್ಯ ಮಹಿಳೆಯರನ್ನು ಅಂಧರಂತೆ ಅನುಕರಿಸಬಾರದು.

## ಸ್ತ್ರೀಪುರುಷರ ವ್ಯತ್ಯಾಸ

ಲಜ್ಜೆಯು ಸ್ತ್ರೀಯರಲ್ಲಿ ಸಹಜವಾಗಿ ಇರುವ ಮತ್ತು ಇರಲೇಬೇಕಾದ ಒಂದು ಉತ್ತಮ ಗುಣ. ದೇವೀ ಮಾಹಾತ್ಮ್ಯದಲ್ಲಿ **ಯಾ ದೇವೀ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ** ಎಂದು ಹೇಳುವಾಗ ಲಜ್ಜೆಯೂ ದೇವಿಯ ಸ್ವರೂಪವೇ ಎಂದು ಸೂಚಿಸಿದೆ. ಆದುದರಿಂದ ಮಹಿಳೆಯರು ಎಲ್ಲ ವಿಧದಲ್ಲೂ ಪುರುಷರಂತಾಗಲು ಪ್ರಯತ್ನಿಸಿದರೆ ತಮ್ಮ ಸ್ವಧರ್ಮವನ್ನು ತ್ಯಜಿಸಿ ಆತ್ಮಹತ್ಯೆ ಮಾಡಿಕೊಂಡಂತೆಯೇ ಸರಿ. ಪ್ರಸಿದ್ಧ ನೋಬೆಲ್ ವಿಜ್ಞಾನಿಯಾದ ಡಾ. ಆಲೆಕ್ಸಿಸ್ ಕಾರೇಲ್‌ಅವರು ಹೇಳಿರುವ ಕೆಲವು ಮಾತುಗಳನ್ನು ಇಲ್ಲಿ ಸ್ಮರಿಸುವುದೊಳ್ಳೆಯದು: 'ಸ್ತ್ರೀ ಪುರುಷರಲ್ಲಿರುವ ವ್ಯತ್ಯಾಸವು ಅವರ ದೇಹದ ಜೀವಾಣುಗಳ ರಚನೆಯನ್ನೂ, ಅವುಗಳಲ್ಲಿ ಅನುಗತ

ವಾಗಿರುವ ರಾಸಾಯನಿಕ ದ್ರವ್ಯಗಳನ್ನೂ ಅನುಸರಿಸಿರುತ್ತದೆ. ಈ ಮೂಲಭೂತ ಸತ್ಯಗಳ ಅಜ್ಞಾನದಿಂದಲೇ ಕೆಲವರು ಸ್ತ್ರೀ ಪುರುಷರಿಬ್ಬರಿಗೂ ಸಮಾನವಾದ ವಿದ್ಯಾಭ್ಯಾಸ, ಸಮಾನ ಜವಾಬ್ದಾರಿಗಳು ಇರಬೇಕೆಂದು ವಾದಿಸುತ್ತಿರುವುದು. ನಿಜವಾಗಿ ನೋಡಿದರೆ ಪುರುಷನಿಗಿಂತ ಸ್ತ್ರೀಯು ಬಹಳವಾಗಿ ಭಿನ್ನಳು. ಖಗೋಳಶಾಸ್ತ್ರದ ನಿಯಮಗಳಂತೆಯೇ ಮಾನವ ಶರೀರಶಾಸ್ತ್ರದ ನಿಯಮಗಳೂ ಕೂಡ ತುಂಬ ಕಠಿನವಾದವು. ಈ ನಿಯಮವನ್ನು ಕೇವಲ ನಮ್ಮ ಇಷ್ಟಾನಿಷ್ಟಗಳಿಂದ ಬದಲಾಯಿಸಲು ಆಗುವುದಿಲ್ಲ.... ಸ್ತ್ರೀಯರು ತಮ್ಮ ಶಕ್ತಿ ಪ್ರತಿಭೆಗಳನ್ನು ತಮ್ಮ ಸ್ವಭಾವಕ್ಕೆ ತಕ್ಕಂತೆ ಬೆಳೆಸಿಕೊಳ್ಳಬೇಕೇ ಹೊರತು ಪುರುಷರನ್ನು ಅನುಕರಿಸಬಾರದು. ನಾಗರಿಕತೆಯ ಮತ್ತು ಸಂಸ್ಕೃತಿಯ ಪ್ರಗತಿಯಲ್ಲಿ ಅವರ ಪಾತ್ರ ಪುರುಷರ ಪಾತ್ರಕ್ಕಿಂತ ಹಿರಿದು. ಹುಡುಗರಿಗೂ, ಹುಡುಗಿಯರಿಗೂ ದೈಹಿಕವಾಗಿಯಾಗಲಿ, ಬೌದ್ಧಿಕವಾಗಿಯಾಗಲಿ ಒಂದೇ ರೀತಿಯ ಶಿಕ್ಷಣವನ್ನು ಕೊಡಬಾರದು. ವಿದ್ಯಾಭ್ಯಾಸವು ಅವರಿಬ್ಬರ ದೈಹಿಕ ಮತ್ತು ಮಾನಸಿಕ ವಿಶೇಷಗಳನ್ನು ಹೊಂದಿಕೊಂಡಿರಬೇಕು. ಸ್ತ್ರೀಪುರುಷರಲ್ಲಿರುವ ವ್ಯತ್ಯಾಸಗಳು ವೈಶಿಷ್ಟ್ಯಗಳು ಬದಲಾಯಿಸಲಾಗದಂಥ ವ್ಯತ್ಯಾಸಗಳು ಎಂಬುದನ್ನು ನೆನಪಿನಲ್ಲಿಡಬೇಕು.

## ಗೃಹಿಣಿಯೇ ಮನೆಯ ರಾಣಿ

ಹೇಳುವುದೆಲ್ಲವನ್ನೂ ಹೇಳಿಯಾದ ಮೇಲೆ ಗೃಹಸಂಸಾರಗಳೇ ಮಹಿಳೆಯ ಮುಖ್ಯಕ್ಷೇತ್ರ ಎಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಅಲ್ಲಿ ಆಕೆಯೇ ಕೇಂದ್ರ ಶಕ್ತಿ. ಮದುವೆಯಾದನಂತರ ವಧುವು ಪತಿಯ ಮನೆಗೆ ಹೊರಡುವ ಸಂದರ್ಭದಲ್ಲಿ ಆಕೆಯ ಮಾತಾಪಿತೃಗಳು ಮಾಡುವ ಆಶೀರ್ವಾದವನ್ನು ಋಗ್ವೇದದಲ್ಲಿ ಹೀಗೆ ಹೇಳಿದೆ: **ಸಮ್ರಾಜ್ಞೀ ಶ್ವಶುರೇ ಭವ. ಸಮ್ರಾಜ್ಞೀ ಶ್ವಶ್ರುವಾಂ ಭವ. .ನನಾಂದರೀ ಸಮ್ರಾಜ್ಞೀ ಭವ. ಸಮ್ರಾಜ್ಞೀ ಅಧಿದೇವೃಷು** (೧೦.೮೫.೪೬) ( ಅರ್ಥ: ಮನೆಯಲ್ಲಿ ಮಾವನಿಗೆ ರಾಣಿಯಂತಿರು, ಅತ್ತೆಗೆ ರಾಣಿಯಂತಿರು, ನಾದಿನಿಗೆ ರಾಣಿಯಂತಿರು, ಮೈದುನನಿಗೆ ರಾಣಿಯಂತಿರು!); ಮತ್ತು, **ಮೂರ್ಧಾನಂ ಪತ್ಯುರಾರೋಹ ಪ್ರಜಯಾ ಚ ವಿರಾಟ್ ಭವ** (ಋಗ್ವೇದ) (ಅರ್ಥ: ನಿನ್ನ ಪತಿಯ ಶಿರಸ್ಸನ್ನು ಅಲಂಕರಿಸುವ ರತ್ನವಾಗು ಮತ್ತು ಸಂತಾನದ ಮೂಲಕ ವಿರಾಟ್ ಆಗು).

**ನೈತಿಕ ಮತ್ತು ಆಧ್ಯಾತ್ಮಿಕ ತತ್ತ್ವಗಳಿಗೆ ಗೃಹವೇ ಆಶ್ರಯ ಮತ್ತು ಗೃಹಿಣಿಯು ಅವುಗಳ ಪೋಷಕಿ.**

ಮಹಿಳೆಯು ಸಂಸಾರದಲ್ಲಿ ವಹಿಸುವ ಮುಖ್ಯ ಪಾತ್ರಗಳೆಂದರೆ ಪತ್ನಿಯ ಮತ್ತು ಮಾತೆಯ ಪಾತ್ರ. ಈ ಪಾತ್ರಗಳನ್ನು ಆಕೆಯು ಹೇಗೆ ನಿರ್ವಹಿಸುತ್ತಾಳೆ ಎಂಬುದರ ಮೇಲೆ ಆಕೆಯ ಕೀರ್ತಿ ನಿಂತಿದೆ. ಆಕೆಯು ತನ್ನ ಪ್ರತಿಭೆಯನ್ನು ತೋರಿಸಲು ಇವೇ ಅತ್ಯುತ್ತಮ ಕ್ಷೇತ್ರಗಳು. ಸಂಪಾದನೆಗಾಗಿ ಪುರುಷನು ಹಗಲೆಲ್ಲ ದುಡಿಯುವುದರಿಂದ ಆತನ ಶ್ರೇಯಸ್ಸು, ಮನೆಯಲ್ಲಿ ಆತನ ಪತ್ನಿ ಹೇಗೆ ಆಳುವಳೆಂಬುದನ್ನು ಹೊಂದಿಕೊಂಡಿದೆ. ನೈತಿಕ ಮತ್ತು ಆಧ್ಯಾತ್ಮಿಕ ತತ್ತ್ವಗಳಿಗೆ ಗೃಹವೇ ಆಶ್ರಯ ಮತ್ತು ಗೃಹಿಣಿಯು ಅವುಗಳ ಪೋಷಕಿ. ಆದುದರಿಂದಲೇ ನಮ್ಮ ಧರ್ಮಗ್ರಂಥಗಳಲ್ಲಿ ಆಕೆಯನ್ನು ಸಹಧರ್ಮಿಣಿ (ಎಂದರೆ ಧರ್ಮದಲ್ಲಿ ಸಹಭಾಗಿ) ಎಂದು ಕರೆದಿರುವುದು.

## ತಾಯಿಯ ಪಾತ್ರ

ಗೃಹಕ್ಷೇತ್ರದಲ್ಲಿ ಪುರುಷನು ಆಕೆಯ ಕರ್ತವ್ಯಗಳನ್ನು ಮಾಡಲು ಸಮರ್ಥನಲ್ಲ. ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳಸುವುದಂತೂ ಆಕೆಯ ವಿಶೇಷ ಹಕ್ಕು. ಇದನ್ನೇ ಡಾ. ರಾಧಾಕೃಷ್ಣನ್ ಅವರು ತಮ್ಮ ಗ್ರಂಥಗಳಲ್ಲಿ ಒಂದೆಡೆ ಹೀಗೆ ಹೇಳಿರುತ್ತಾರೆ: 'ಎಲ್ಲಿಯವರೆಗೆ ಮಕ್ಕಳು ಆಕಾಶದಿಂದ ಉದುರದೆ, ತಾಯ ಗರ್ಭದಲ್ಲಿಯೇ ಉಂಟಾಗಬೇಕೋ ಅಲ್ಲಿಯವರೆಗೂ ಸ್ತ್ರೀಯರಿಗೆ (ಆ ಬಗ್ಗೆ) ವಿಶೇಷ ಕರ್ತವ್ಯವಿರುತ್ತದೆ. ಹುಟ್ಟಿದಾಗ ಪ್ರಾಣಿಸಂತಾನದಂತೆ ಬಲವಾಗಿರದ ಮನುಷ್ಯಸಂತಾನವು ಅತ್ಯಂತ ಅಸಹಾಯಕ ಸ್ಥಿತಿಯಲ್ಲಿರುವುದರಿಂದ ತಾಯ ಲಾಲನೆ ಪೋಷಣೆ ಬಹು ಆವಶ್ಯಕ.'

ಆಧುನಿಕ ಮಹಿಳೆಯರು ಈ ವಿಷಯದಲ್ಲಿ ಮತ್ತು ತಮ್ಮ ಗೃಹದಲ್ಲಿ ತಾವು ನಿರ್ವಹಿಸಬೇಕಾದ ಕರ್ತವ್ಯಗಳ ವಿಷಯದಲ್ಲಿ ತಮ್ಮ ಮುಖ್ಯ ಪಾತ್ರವನ್ನು ಅಷ್ಟಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ದಾದಿಯರು, ಸ್ಕೂಲುಗಳು, ಹಾಸ್ಟೆಲ್ಲುಗಳು, ಆಸ್ಪತ್ರೆಗಳು ಇರುವಾಗ ನಾವೇಕೆ ವೃಥಾ ಶ್ರಮಪಡಬೇಕು?—ಎಂದು ಕೆಲವರು ಯೋಚಿಸಬಹುದು. ಆದರೆ ಬೆಳೆಯುವ ಮಕ್ಕಳ ಮೇಲೆ ತಾಯಿಯ ಸ್ವಂತ ಪ್ರೀತಿ, ಸೇವೆಗಳಿಂದ ಆಗುವ ಅದ್ಭುತ ಪರಿಣಾಮವು ಇತರರ ಸೇವೆಯಿಂದಾಗದು ಎಂಬುದನ್ನು ಎಂದಿಗೂ ಮರೆಯಬಾರದು. ನಮ್ಮ ಚರಿತ್ರೆಯ ಅನೇಕ ಮಹಾಪುರುಷರು ಚಿಕ್ಕಂದಿನಲ್ಲಿ ತಮ್ಮ ತಾಯಂದಿರ ಪ್ರೀತಿ ವಿಶ್ವಾಸಪೂರಿತ ಸೇವೆಯಿಲ್ಲದಿದ್ದರೆ ಮಹಾ ಪುರುಷರಾಗುತ್ತಿದ್ದರೋ ಇಲ್ಲವೋ ಅದೇ ಸಂದೇಹ. ಭಾರತದ ಸಂಸ್ಕೃತಿಯು ಇಂದಿಗೂ ಉಳಿದುಕೊಂಡು ಬಂದಿದ್ದರೆ ಅದು ಇಂಥ ತಾಯಂದಿರ ಪ್ರಭಾವದಿಂದಲೇ ಎನ್ನಬಹುದು

## ಸಮಾಜಹಿತವನ್ನು ಕಡೆಗಣಿಸಬಾರದು

ಹೀಗೆಂದ ಮಾತ್ರಕ್ಕೇ ಮಹಿಳೆಯರು ಪರದಾಪದ್ಧತಿಗೆ ಹಿಂತಿರುಗಬೇಕು ಎಂದರ್ಥವಲ್ಲ. ಅದು ಅನ್ಯಾಯ ಮತ್ತು ಅಸಾಧ್ಯ. ಆದರೆ ಅವರು ಹಿಂದು ಮುಂದು ನೋಡದೆ ಪುರುಷರೊಡನೆ ಸಮಾನ ಸ್ಪರ್ಧೆಗೆ ಇಳಿಯುವುದರಿಂದ ಉಂಟಾಗುವ ಹಾನಿಗಳನ್ನು ಮಾತ್ರ ತೋರಿಸಲು ಪ್ರಯತ್ನಿಸುತ್ತಿದ್ದೇವೆ; ಏಕೆಂದರೆ ಸಂಸಾರವು ಒಡೆದರೆ ಅದರೊಡನೆ ನಮ್ಮ ಸಂಸ್ಕೃತಿಯೂ ಒಡೆಯುತ್ತದೆ. ಈ ಸಮಸ್ಯೆಗಳನ್ನು ತೀವ್ರವಾಗಿ ಆಲೋಚಿಸಿ ತಮ್ಮ ಪ್ರಗತಿಗೆ ಧಕ್ಕೆ ಬರದಂತೆ ಅವುಗಳನ್ನು ಪರಿಹರಿಸಿಕೊಳ್ಳುವ ಜವಾಬ್ದಾರಿ ಪೂರ್ಣವಾಗಿ ಮಹಿಳೆಯರಿಗೇ ಸೇರಿದ್ದು. ತಮ್ಮ ವಿದ್ಯೆ ಸ್ವಾತಂತ್ರ್ಯಗಳ ಜೊತೆಗೆ ತಮ್ಮ ಮಕ್ಕಳ, ಸಮಾಜದ ಮತ್ತು ರಾಷ್ಟ್ರದ ಹಿತವೂ ಸಾಧಿಸಲ್ಪಡಬೇಕು ಎಂಬುದನ್ನು ಗಮನದಲ್ಲಿಟ್ಟುಕೊಂಡು ಅವರು ಈ ಸಮಸ್ಯೆಗಳಿಗೆ

ಪರಿಹಾರವನ್ನು ಕಂಡುಹಿಡಿಯಬೇಕು.

ಆರ್ಥಿಕ ಒತ್ತಡಗಳ ದೆಸೆಯಿಂದ ಸ್ತ್ರೀಯರೂ ಧನಸಂಪಾದನೆಯ ಮಾರ್ಗವನ್ನು ಹಿಡಿಯುತ್ತಿರುವುದರಿಂದ ಸಂಸಾರದ ಅಡಿಪಾಯ ಅಲ್ಲಾಡುತ್ತಿದೆ, ಸಂಸಾರ ಸಂಬಂಧಗಳು ಕೇವಲ ಔಪಚಾರಿಕವಾಗುತ್ತಿವೆ ಎಂಬುದರಲ್ಲಿ ಯಾವ ಸಂದೇಹವೂ ಉಳಿಯಬೇಕಾಗಿಲ್ಲ. ಇದರ ಪರಿಣಾಮವಾಗಿ ಸಂಸಾರಗಳಲ್ಲಿ ವ್ಯವಸ್ಥೆ ಕೆಡುತ್ತಿದೆ. ಇದನ್ನು ಹೇಗೆ ಸರಿಪಡಿಸುವುದು ಎಂಬುದೇ ಒಂದು ತೀವ್ರ ಸಮಸ್ಯೆಯಾಗಿದೆ! ನಾವೆಲ್ಲರೂ ಸದಾ ದೂರುತ್ತಿರುವ ವಿದ್ಯಾರ್ಥಿಗಳ ಸಮಸ್ಯೆಯ ಮೂಲವೂ ಇಲ್ಲಿಯೇ ಇದೆ! ಬೆಳೆಯುವ ಮಕ್ಕಳನ್ನು ಮನೆಯಲ್ಲಿ ಸರಿಯಾಗಿ ಬೆಳಸದ ಫಲವೇ ಇದು!

ಆದುದರಿಂದ ಮಹಿಳೆಯರು ತಮ್ಮ ಗುರಿಯ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನಿಟ್ಟುಕೊಂಡು ಅದಕ್ಕೆ ತಕ್ಕಂತೆ ತಮ್ಮ ಕಾರ್ಯಕರ್ತವ್ಯಗಳನ್ನು ಅಳವಡಿಸಿಕೊಂಡರೆ ಎಲ್ಲವೂ ಸರಿ ಹೋಗುತ್ತದೆ. ಇದನ್ನು ಮಾಡುವಾಗ ಭಾರತೀಯ ಸಂಸ್ಕೃತಿಗೆ ಅನುಗುಣವಾಗಿ ಮಾಡಬೇಕೇ ಹೊರತು ಪಾಶ್ಚಾತ್ಯ ಸಂಸ್ಕೃತಿಗೆ ಅನುಗುಣವಾಗಿ ಅಲ್ಲ ಎಂಬುದು ನೆನಪಿನಲ್ಲಿರಬೇಕು.

ತಾಯ್ತನದ ಅರಿವುಳ್ಳ ತಾಯಂದಿರಿಗೆ ಪ್ರಪಂಚವನ್ನು ಸುವ್ಯವಸ್ಥೆಗೆ ತರುವ ಸಾಮರ್ಥ್ಯವಿದೆ. ಉತ್ತಮ ತಾಯಿಯ ಆರೈಕೆ ಸ್ಥಿರವೂ ಶಾಂತಿಯುತವೂ ಆದ ಒಂದು ನಾಗರಿಕತೆಯನ್ನು ಕಟ್ಟುವಲ್ಲಿ ನಂಬಲಸಾಧ್ಯವಾಗುವಷ್ಟು ಕೊಡುಗೆಯನ್ನು ನೀಡುತ್ತದೆ

ಸಿ.ಇ.ಬಾರ್ಕರ್

(ಪ್ರಸಿದ್ಧ ಮನೋವೈದ್ಯ)

## ಪ್ರಹಸನ ಪ್ರಸಂಗ

❋ **ವ್ಯಕ್ತಿ**ಯೊಬ್ಬನು ವೈದ್ಯನ ಹತ್ತಿರ ಬಂದು, 'ನನ್ನ ದೇಹದ ಎಲ್ಲ ಭಾಗದಲ್ಲಿಯೂ ನೋವಾಗುತ್ತಿದೆ' ಎಂದನು. ಇದನ್ನು ಕೇಳಿ ವೈದ್ಯನಿಗೆ ಆಶ್ಚರ್ಯವಾಯಿತು. 'ನಿನ್ನ ಬೆರಳಿನಿಂದ ದೇಹದ ಬೇರೆ ಬೇರೆ ಬಾಗಗಳನ್ನು ಮುಟ್ಟು' ಎಂದು ಆ ವ್ಯಕ್ತಿಗೆ ಹೇಳಿದನು. ಅವನು ತನ್ನ ತೋರ್ಬೆರಳಿನಿಂದ ಹಣೆ, ಕಿವಿ, ಕೆನ್ನೆ, ಕುತ್ತಿಗೆ, ಹೊಟ್ಟೆ—ಹೀಗೆ ಬೇರೆ ಬೇರೆ ಭಾಗಗಳನ್ನು ಸ್ಪರ್ಶಿಸುತ್ತ ಹೋದನು. ಒಮ್ಮೊಮ್ಮೆ ಹಾಗೆ ಸ್ಪರ್ಶಿಸಿದಾಗಲೂ ತೀವ್ರ ವೇದನೆಯನ್ನು ವ್ಯಕ್ತಪಡಿಸುತ್ತಿದ್ದನು. ಅವನ ಮುಖವನ್ನು ನೋಡಿದಾಗ ಅವನು ನಟಿಸುತ್ತಿರುವನು ಎಂದು ವೈದ್ಯನಿಗೆ ಅನಿಸಲಿಲ್ಲ.

ಇದೆಂತಹ ವಿಚಿತ್ರ ಕಾಯಿಲೆ, ಒಮ್ಮೆಯೇ ದೇಹದ ಎಲ್ಲ ಭಾಗಗಳಲ್ಲಿಯೂ ನೋವಾಗುವುದು ಹೇಗೆ ಸಾಧ್ಯ—ಎಂದು ವೈದ್ಯನು ಚಿಂತಿಸತೊಡಗಿದನು. ರೋಗಿಯನ್ನು ಅನೇಕ ಪರೀಕ್ಷೆಗಳಿಗೆ ಒಳಪಡಿಸಿ ಎಕ್ಸ್-ರೇ, ಸ್ಕ್ಯಾನಿಂಗ್ ಮುಂತಾದ ಉಪಚಾರಗಳನ್ನು ಮಾಡಿ ಕೊನೆಗೆ ವೈದ್ಯನು ರೋಗಿಯ ನಿಜವಾದ ಸಮಸ್ಯೆ ಏನು ಎಂಬುದನ್ನು ಕಂಡುಹಿಡಿಯುವುದರಲ್ಲಿ ಯಶಸ್ವಿಯಾದನು. ರೋಗಿಗೆ ಹೇಳಿದನು: 'ನೋವಿರುವುದು ನಿನ್ನ ತೋರ್ಬೆರಳಿನಲ್ಲಿ—ಅಲ್ಲಿ ಫ್ರಾಕ್ಚರ್ ಆಗಿದೆ.'

ಹೀಗೆಯೇ ನಾವು ನಮ್ಮ ದುಃಖದ ಮೂಲವನ್ನು ಅರಿಯದೆ ಹೊರಗಿನ ಸನ್ನಿವೇಶಗಳನ್ನೂ ವ್ಯಕ್ತಿಗಳನ್ನೂ ವಸ್ತುಗಳನ್ನೂ ನಮ್ಮ ದುಃಖಕ್ಕಾಗಿ ದೂರುತ್ತೇವೆ. ಆದರೆ ನಮ್ಮ ದುಃಖದ ಮೂಲ ನಮ್ಮ ಮನಸ್ಸೇ.

❋ **ಒಂದು** ಮೂರ್ತಿಯನ್ನು ಪ್ರತಿಷ್ಠಾಪಿಸಿದ ಮಾತ್ರಕ್ಕೆ ಭಗವಂತನು ದೇವಾಲಯದಲ್ಲಿ ಬಂದು ನೆಲಸುವುದಿಲ್ಲ. ಅಲ್ಲಿ ಅವನ ಸಾನ್ನಿಧ್ಯ ಭಕ್ತರ ಭಕ್ತಿ ಭಾವವನ್ನು ಅವಲಂಬಿಸುತ್ತದೆ.

ಅಮೆರಿಕದಲ್ಲಿ ಬಿಳಿಯರಿಗೆ ಮತ್ತು ಕರಿಯರಿಗೆ ಪ್ರತ್ಯೇಕ ಚರ್ಚುಗಳಿರುತ್ತಿದ್ದುವಂತೆ. ಬಿಳಿಯರ ಚರ್ಚಿಗೆ ಕರಿಯರು ಹೋಗುವಂತಿಲ್ಲ; ಕರಿಯರ ಚರ್ಚಿಗೆ ಬಿಳಿಯರು ಹೋಗುತ್ತಿರಲಿಲ್ಲ.

ಒಮ್ಮೆ ಕರಿಯನೊಬ್ಬನು ಒಂದು ಊರಿಗೆ ಯಾವುದೋ ಕಾರ್ಯಾರ್ಥವಾಗಿ ಹೋಗಿದ್ದ. ಅವನು ನಿಷ್ಠಾವಂತ ಕ್ರೈಸ್ತ. ಪ್ರಾರ್ಥನೆಯ ಸಮಯ ಬಂದಕೂಡಲೆ ಹತ್ತಿರದಲ್ಲಿಯೇ ಇದ್ದ ಒಂದು ಚರ್ಚಿಗೆ ಪ್ರಾರ್ಥನೆಗಾಗಿ ಹೋದನು. ಆತ ಒಳಗೆ ಪ್ರವೇಶಿಸುವುದಕ್ಕೆ ಮುಂಚೆಯೆ ಪಾದ್ರಿಯೊಬ್ಬನು ಅವನನ್ನು ಕರೆದು, 'ಇದು ಬಿಳಿಯರಿಗಾಗಿ ಮೀಸಲಿರುವ ಚರ್ಚು. ನಿನಗೆ ಪ್ರವೇಶವಿಲ್ಲ', ಎಂದನು. ಕರಿಯನು, 'ನಾನು ಈಗ ಪ್ರಾರ್ಥನೆ ಮಾಡಲೇಬೇಕು. ಅದಿಲ್ಲದೆ ಇರಲಾರೆ. ದಯವಿಟ್ಟು ಅವಕಾಶ ಕೊಡಿ' ಎಂದು ಕಳಕಳಿಯಿಂದ ಕೇಳಿಕೊಂಡನು.

ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಪಾದ್ರಿ ಹೇಳಿದ : 'ನೋಡು, ನೀನು ಆ ಚರ್ಚಿನ ಮುಂದೆ ನಿಂತು, "ನಾನು ಒಳಗೆ ಪ್ರವೇಶಿಸಬಹುದೆ?" ಎಂದು ಕ್ರಿಸ್ತನನ್ನೇ ಕೇಳು. ಅವನು "ಹ್ಞು" ಎಂದರೆ ನೀನು ಹೋಗಬಹುದು. ನನ್ನ ಅಭ್ಯಂತರವಿಲ್ಲ.'

ಕರಿಯ ಚರ್ಚಿನ ಮುಂದೆ ಕೈಮುಗಿದು ಸ್ವಲ್ಪಹೊತ್ತು ನಿಂತು, ಅನಂತರ ತನ್ನ ದಾರಿಯನ್ನು ಹಿಡಿದನು. ಪಾದ್ರಿ ಅವನನ್ನು ಕರೆದು ವಿಚಾರಿಸಿದನು:

'ಕ್ರಿಸ್ತನನ್ನು ಕೇಳಿದೆಯ?'

'ಹೌದು.'

'ಅವನು ಏನೆಂದ? '

'ಅವನು ಹೇಳಿದ,"ನಾನೇ ಇದುವರೆಗೂ ಈ ಚರ್ಚನ್ನು ಪ್ರವೇಶಿಸಿಲ್ಲ. ಆದ್ದರಿಂದ ನಿನಗೆ ಪ್ರವೇಶವಿಲ್ಲವೆಂದು ಚಿಂತಿಸಬೇಕಾಗಿಲ್ಲ. ಹೊರಟುಹೋಗು"ಎಂದು.'